**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಸಿ.ಸಿ. ನಂ:212/2022 ಪಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕ: **17.12.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲು:** ಆರೋಪಿ ಪರ ಶ್ರೀ ಕೆ.ಜಿ.ಪಿ ವಕೀಲರಿಂದ:

ನಾನು ಈ ಪ್ರಸ್ತುತ ಪ್ರಕರಣವನ್ನು ಹೊರತುಪಡಿಸಿ ಸಿಸಿ ನಂ.**1426/2022** ರಂತೆ ನಿಂಗಣ್ಣ ಬಿ ರಾಥೋಡ ಮತ್ತು ಸಿಸಿ ನಂ.**213/2022** ರಂತೆ ಬಸಮಣಿರವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿ.

ನನಗೆ ಈ ಪ್ರಕರಣದ ಆರೋಪಿರವರ ಪರಿಚಯ ಇರುತ್ತದೆ. ಸದರಿಯವರು ನಮ್ಮ ಊರಿನವರಾದ ಕಾರಣ ನನಗೆ ಪರಿಚಯ ಇರುತ್ತದೆ. ಆರೋಪಿಗೆ ತಮ್ಮ ಊರಿನಲ್ಲಿ **4-5** ಎಕರೆ ಜಮೀನು ಇದ್ದು, ಸದರಿಯವರು ಆರ್ಥಿಕವಾಗಿ ಸದೃಢವಾಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಆರೋಪಿಗೆ ಹಣವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಆರೋಪಿಗೆ ಹಣ ನೀಡುವ **1** ತಿಂಗಳ ಮುನ್ನ ಸದರಿಯವರು ನನಗೆ ಹಣವನ್ನು ಕೇಳಿರುತ್ತಾರೆ. ಸದರಿ ವಿಚಾರವನ್ನು ನಾನು ನೀಡಿದ ನೋಟಿಸಿನಲ್ಲಿ ಅಥವಾ ಈ ಪ್ರಕರಣದ ಪಿರ್ಯಾದಿನಲ್ಲಿ ನಾನು ತಿಳಿಸಿರುವುದಿಲ್ಲ. ಆರೋಪಿಗೆ ಹಣವನ್ನು ನೀಡಿದ ಬಾಬ್ತು ದಾಖಲೆಗಳನ್ನು ಬರೆಸಿಕೊಂಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಯು ಚೆಕ್ಕನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯೇ ನಿಪಿ-**1** ಚೆಕ್ಕನ್ನು ಬರವಣಿಗೆ ಮಾಡಿ ನೀಡಿರುತ್ತಾರೆ. ಆರೋಪಿಯು ತಮ್ಮ ವೈಯುಕ್ತಿಕ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಣವನ್ನು ಸಾಲವಾಗಿ ಕೇಳಿರುತ್ತಾರೆ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ನಾನು ಆರೋಪಿಗೆ ದಿನಾಂಕ **27.09.2021** ರಂದು ನೀಡಿರುತ್ತೇನೆ. ಆರೋಪಿಗೆ ಚೆಕ್ ಮುಖಾಂತರ ಹಣ ನೀಡಲು ತೊಂದರೆ ಇರಲಿಲ್ಲ. ಸದರಿ ದಿನ ನನ್ನ ಬಳಿ ಹಣ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಸಾಕ್ಷ್ಯ ಮುಂದುವರಿದು ನಾನು ವ್ಯವಹಾರದ ಬಾಬ್ತು ಮನೆಯಲ್ಲಿ ಸುಮಾರು **10** ರಿಂದ **15** ಲಕ್ಷ ಹಣ ಶೇಖರಿಸಿ ಇಟ್ಟಿರುತ್ತೇನೆ, ಅದನ್ನು ನಾನು ಆರೋಪಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ರವಿ ಬ್ರಿಕ್ಸ ಎನ್ನುವ ಇಟ್ಟಿಗೆ ಕಾರ್ಖಾನೆ ಹೊಂದಿರುತ್ತೇನೆ, ನನಗೆ ಜಮೀನು ಇರುತ್ತದೆ ಮತ್ತು ನಾನು ಪಿಡಬ್ಲೂಡಿ ಇಲಾಖೆಯಲ್ಲಿ ರೋಡ ಕಾಂಟ್ರಕ್ಟರ ಕೆಲಸ ಮಾಡುತ್ತಿದ್ದೆ. ನಾನು ರವಿ ಬ್ರಿಕ್ಸ ಕಾರ್ಖಾನೆ ಹೊಂದಿರುವ ಬಾಬ್ತು ಪರವಾನಿಗೆಯನ್ನು ಪಡೆದುಕೊಂಡಿರುತ್ತೇನೆ. ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ರವಿ ಬ್ರಿಕ್ಸ ಇಟ್ಟಿಗೆ ಕಾರ್ಖಾನೆ ನಡೆಸುತ್ತಿರುವುದಿಲ್ಲ, ಕಾಂಟ್ರಕ್ಟರ್ ಕೆಲಸ ಮಾಡಿಸಿರುವುದಿಲ್ಲ ಹಾಗೂ ನಾನು ಯಾವುದೇ ಜಮೀನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಇಟ್ಟಿಗೆ ಕಾರ್ಖಾನೆಯ ಬಾಬ್ತು ವಹಿವಾಟಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಪಾವತಿ ಮಾಡಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಕೋವಿಡ ಸಾಂಕ್ರಮಿಕ ರೋಗ ಇದ್ದ ಕಾರಣ 2 ವರ್ಷಗಳಿಂದ ಆದಾಯ ತೆರಿಗೆ ಪಾವತಿ ಮಾಡಿರುವುದಿಲ್ಲ, ಆದರೆ ಜಿ.ಎಸ್.ಟಿ ಪಾವತಿ ಮಾಡಿದ ಬಾಬ್ತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಕೋವಿಡ ಇದ್ದ ಸಂದರ್ಭದಲ್ಲಿ ನನ್ನ ಇಟ್ಟಿಗೆ ಕಾರ್ಖಾನೆ ನಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಇಟ್ಟಿಗೆ ಕಾರ್ಖಾನೆಗೆ ಕೋವಿಡ ಸಮಯದಲ್ಲಿ ಕಚ್ಚಾ ವಸ್ತುಗಳನ್ನು ಖರೀದಿಸಿದ ಬಾಬ್ತು ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಸದರಿ ಬಿಲ್ ಗಳಿಗೆ ಸಂಬಂಧಿಸಿದಂತೆ ಜಿ.ಎಸ್.ಟಿ ಪಾವತಿ ಮಾಡಿದ ದಾಖಲೆಯನ್ನು ಮಾತ್ರ ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಕೋವಿಡ ಸಮಯದಲ್ಲಿ ನಾನು ಇಟ್ಟಿಗೆ ಕಾರ್ಖಾನೆಗೆ ಯಾವುದೇ ಕಚ್ಚಾ ವಸ್ತುಗಳನ್ನು ಖರೀದಿ ಮಾಡಿಲ್ಲದ ಕಾರಣ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಜಿ.ಎಸ್.ಟಿ ಬಿಲನಲ್ಲಿ ಖರೀದಿ ಮಾಡಿದ ಬಾಬ್ತು ಆದಾಯ ತೆರಿಗೆ ಪಾವತಿ ಮಾಡಬೇಕಾಗುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಾನು ಪ್ರತಿ ತಿಂಗಳು ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಆರೋಪಿಯು ನನಗೆ ಹಣದ ಸಹಾಯ ಕೇಳಿರುವುದಿಲ್ಲ ಮತ್ತು ಸದರಿಯವರಿಗೆ ಹಣವನ್ನು ಸಾಲವಾಗಿ ಕೇಳುವ ಆರ್ಥಿಕ ಬಾದ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಹಣವನ್ನು ಕೇಳಿದ್ದ ಸಮಯದಲ್ಲಿ ನೀಡಲು ನನಗೆ ಆರ್ಥಿಕ ಸಾಮರ್ಥ್ಯ

ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಾನು ನೀಡಿದ ನೋಟಿಸಿಗೆ ಪ್ರತ್ಯುತ್ತರ ನೋಟಿಸ ನೀಡಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಅವರು ಸುಳ್ಳು ಪ್ರತ್ಯುತ್ತರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನೋಟಿಸನನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನೀಡಿರುವ ಪ್ರತ್ಯುತ್ತರದ ವಿಚಾರವನ್ನು ನಾನು ಖಾಸಗಿ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿರುವ ಬರವಣಿಗೆಯನ್ನು ಆರೋಪಿ ಬರೆದಿರುವುದಿಲ್ಲ ಅದನ್ನು ನಾನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಸಹಿ ಮತ್ತು ಬರವಣಿಗೆಯ ಶಾಹಿ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ-6 ದಾಖಲೆಯು ನಾನು ಬ್ಯಾಂಕಿನಲ್ಲಿ ಸಾಲ ಪಡೆಯಲು ಮಾಡಿಸಿದ ದಾಖಲೆಯಾಗಿದ್ದು, ಅದರಲ್ಲಿ ನಾನು ರೂ.30 ಲಕ್ಷ ವಹಿವಾಟು ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಹೇಳಿರುವಂತೆ 3 ವರ್ಷಗಳ ವಹಿವಾಟು ಸುಮಾರು ರೂ.30 ಲಕ್ಷ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ-6 ದಾಖಲೆಯನ್ನು ಈ ಪ್ರಕರಣದ ಸಲುವಾಗಿ ನಮ್ಮ ಆಡಿಟರ್ ಮುಖಾಂತರ ತಯಾರಿಸಿಕೊಂಡು ಬಂದಿದ್ದು, ನನಗೆ ನಿಪಿ-6 ರಲ್ಲಿ ತಿಳಿಸಿರುವಂತೆ ವಾರ್ಷಿಕ ರೂ.30 ಲಕ್ಷ ವಹಿವಾಟು ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-7 ರ ಪ್ರಕಾರ ನಾನು ಯಾವುದೇ ಜಿ.ಎಸ್.ಟಿ ತೆರಿಗೆ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಿಮೆಂಟ್, ಜಲ್ಲಿ ಮತ್ತು ಎಂ ಸ್ಯಾಂಡ್ ಖರೀದಿ ಮಾಡಿದ ಬಾಬ್ತು ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುವುದಿಲ್ಲ, ಆದರೆ ಮುಂದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಾನು ಜಿ.ಎಸ್.ಟಿ ಹೊಂದಿರುವ ಬಾಬ್ತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಇಟ್ಟಿಗೆ ಕಾರ್ಖಾನೆಯಿಂದ ಇಟ್ಟಿಗೆ ಖರೀದಿಸಿದ ಬಾಬ್ತು ಗ್ರಾಹಕರಿಗೆ ಜಿ.ಎಸ್.ಟಿ ಬಿಲನ್ನು ನೀಡುತ್ತೇನೆ, ಸಾಕ್ಷಿ ಮುಂದುವರಿದು ಕೆಲವರು ಬಿಲ್ಲು ಕೇಳಿರುತ್ತಾರೆ ಮತ್ತು ಕೆಲವರು ಬಿಲ್ಲು ಕೇಳುವುದಿಲ್ಲ ಎಂದು ನುಡಿಯುತ್ತಾರೆ. ನಾನು ಜಿ.ಎಸ್.ಟಿ ಪಾವತಿ ಮಾಡಿದ ಬಾಬ್ತು

ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಆದರೆ ಆಡಿಟರ್ ಗೆ ನೀಡಿರುತ್ತೇನೆ. ನಾನು ಹಾಜರುಪಡಿಸಿದ ನಿಪಿ-7 ದಾಖಲೆ ಜಿ.ಎಸ್.ಟಿ ದಾಖಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಂತೆ ನಾನು ಕೇಂದ್ರ ಸರ್ಕಾರಕ್ಕೆ ರೂ.2,81,000/- ಹಣವನ್ನು, ರಾಜ್ಯ ಸರ್ಕಾರಕ್ಕೆ ರೂ.2,81,000/-ಹಣವನ್ನು ಜಿ.ಎಸ್.ಟಿ ಯಾಗಿ ಪಾವತಿ ಮಾಡಬೇಕಾಗಿದ್ದು, ನಾನು ಬರೀ ರೂ.4,650/- ಹಣವನ್ನು ಶುಲ್ಕವಾಗಿ ಪಾವತಿ ಮಾಡಿದ್ದು, ಯಾವುದೇ ತೆರಿಗೆಯನ್ನು ಮಾಡಿರುವುದಿಲ್ಲ ಮತ್ತು ಅದೇ ರೀತಿ ನನಗೆ ಆರೋಪಿಗೆ ಹಣ ನೀಡುವ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-7 ಮತ್ತು 8 ರ ಪ್ರಕಾರ ಯಾವುದೇ ವಹಿವಾಟು ಮಾಡಿರುವುದಿಲ್ಲ, ಆದಕಾರಣ ಸರ್ಕಾರಕ್ಕೆ ಯಾವುದೇ ತೆರಿಗೆಯನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-7 ಮತ್ತು 8 ರಲ್ಲಿ ನೋಂದಾಯಿತ ಮಾಡಿದ ವ್ಯಕ್ತಿಗಳಿಂದ ಖರೀದಿ ಮಾಡಿದರೇ ಜಿ.ಎಸ್.ಟಿ ದಾಖಲೆಗಳು ಹಾಜರುಪಡಿಸಬೇಕಾಗುತ್ತದೆ ಎಂದು ನೋಂದಾಯಿತವಲ್ಲದ ವ್ಯಕ್ತಿಗಳಿಂದ ಕಚ್ಚಾ ಸಾಮಗ್ರಿಗಳನ್ನು ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಆಡಿಟರ್ ನಿಪಿ-7 ಮತ್ತು 8 ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 2022-2023 ನೇ ಸಾಲಿನ ಜಿ.ಎಸ್.ಟಿ ಪಾವತಿ ಮಾಡಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಾನು ಆರೋಪಿಗೆ ಕಾನೂನುಬದ್ಧವಾಗಿ ಸಾಲು ವಸೂಲಾತಿ ಮಾಡುವಂತಹ ಸಾಲವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವಾಗ ಹಾಗೂ ಎಲ್ಲಿ ಸಾಲವನ್ನು ಮರುಪಾವತಿ ಮಾಡಲು ಕೇಳಿರುತ್ತೇನೆ ಎನ್ನುವ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಎಲ್ಲಿ ಹಾಗೂ ಯಾವಾಗ ಸಾಲವನ್ನು ಮರುಪಾವತಿ ಮಾಡಲು ಕೇಳಿರುತ್ತೇನೆ ಎನ್ನುವ ವಿಚಾರವನ್ನು ಖಾಸಗಿ ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಸಾಲವನ್ನು ಮರುಪಾವತಿ ಮಾಡಲು ನಿಪಿ-1

ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ಸಿ.ಸಿ ನಂ.1426/2022 ರ ಆರೋಪಿ ನಿಂಗಣ್ಣ ಬಿ ರಾಥೋಡರವರ ಪರಿಚಯ ಇರುತ್ತದೆ. ಆರೋಪಿಯು ಸುಮಾರು 14-15 ವರ್ಷಗಳಿಂದ ನಮ್ಮ ಊರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಿದ್ದ ಕಾರಣ ಅವರ ಪರಿಚಯ ನನಗೆ ಇರುತ್ತದೆ. ಸದರಿ ವ್ಯಕ್ತಿಯನ್ನು ನಾನು ಜೆಸಿಬಿ ಕೆಲಸಕ್ಕೆ ಕರೆಸಿಕೊಳ್ಳುತ್ತಿದ್ದೆ ಹಾಗೂ ಹಣ ಪಾವತಿ ಮಾಡುತ್ತಿದ್ದೆ, ಆದಕಾರಣ ನನಗೆ ಅವರ ಪರಿಚಯ ಇರುತ್ತದೆ. ನಾನು ಸದರಿ ವ್ಯಕ್ತಿಗೆ ಜೆಸಿಬಿ ಕೆಲಸದ ಬಾಬ್ತು ರೂ.3 ಲಕ್ಷ ಹಣವನ್ನು ಮುಂಗಡ ಹಣವಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮುಂಗಡ ಹಣದ ಬಾಬ್ತು ಸದರಿ ವ್ಯಕ್ತಿಯಿಂದ ರೂ.3 ಲಕ್ಷ ಮೊತ್ತದ ಸಹಿ ಮಾಡಿದ ವಿಜಯಪುರ ಜಿಲ್ಲೆಯ ತಾಳಿಕೋಟೆ ಶಾಖೆಯ ಖಾಲಿ ಚೆಕ್ಕನ್ನು ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ನಾನು ಸದರಿ ವ್ಯಕ್ತಿಗೆ ಮುಗಂಡ ಹಣವನ್ನು ನೀಡುವ ಸಮಯದಲ್ಲಿ ಸ್ಥಳೀಯ ವ್ಯಕ್ತಿಯಾದ ಈ ಪ್ರಕರಣದ ಆರೋಪಿ ಕಡೆಯಿಂದ ಸಹಿ ಮಾಡಿದ ಖಾಲಿ ಚೆಕ್ಕನ್ನು ಭದ್ರತೆಗಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮತ್ತು ನಿಂಗಣ್ಣ ಬಿ ರಾಥೋಡರವರ ನಡುವಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ಸದರಿ ವ್ಯಕ್ತಿಗೆ ಮುಂಗಡ ಹಣವನ್ನು ಪಾವತಿ ಮಾಡಿದ್ದರೂ ಸಹ ಜೆಸಿಬಿ ವಾಹನದ ಕೆಲಸಕ್ಕೆ ಸರಿಯಾಗಿ ಬರದೇ ಇರುವ ಕಾರಣ ನಾನು ಮುಂಗಡ ಹಣವನ್ನು ವಾಪಸ ನೀಡುವಂತೆ ಹೇಳಿ ಸದರಿಯವರ ಜಿಸಿಬಿ ವಾಹನವನ್ನು ನನ್ನ ಜಮೀನಿನಲ್ಲಿಯೇ ಇಟ್ಟುಕೊಂಡಿದ್ದೆನು ಎಂದರೆ ಸರಿಯಲ್ಲ. ಸದರಿ ವಿಚಾರದ ಬಾಬ್ತು ಸದರಿ ವ್ಯಕ್ತಿಯು ನನ್ನ ವಿರುದ್ಧ ಬನ್ನೂರು ಪೊಲೀಸ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸ ಠಾಣೆಯಲ್ಲಿ ನನ್ನನ್ನು ಹಾಗೂ ಈ ಪ್ರಕರಣದ ಆರೋಪಿ ಮತ್ತು ನಿಂಗಣ್ಣ ಬಿ ರಾಥೋಡ ರವರ ನಡುವೆ ಮಾತುಕತೆ ಮಾಡಿಸಿ ರೂ.3,55,000/- ಹಣವನ್ನು ನನಗೆ ಮರು ಪಾವತಿ ಮಾಡುವಂತೆ ತಿಳಿಸಿ ಪ್ರಕರಣವನ್ನು ಇತ್ಯರ್ಥಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರೂ.3,55,000/- ಹಣದ ತಿರುವಳಿಗಾಗಿ ನಾನು ದಾಖಲಿಸಿರುವ ಸಿಸಿ ನಂ.213/2022 ರ ಪ್ರಕರಣದ ಆರೋಪಿಯಿಂದ ಮಳವಳ್ಳಿ ಶಾಖೆಯ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ

ರೂ.2,05,000/- ಮತ್ತು ರೂ.1,50,000/- ಮೊತ್ತದ ಎರಡು ಸಹಿ ಮಾಡಿದ ಖಾಲಿ ಚೆಕ್ಕನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಈ ಪ್ರಕರಣಕ್ಕೂ ಅದಕ್ಕೂ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸ ಠಾಣೆಯಲ್ಲಿ ಇತ್ಯರ್ಥಪಡಿಸಿದಂತೆ ರೂ.3,55,000/- ಹಣವನ್ನು ಪಾವತಿ ಮಾಡಲು ನನ್ನನ್ನು ಪೊಲೀಸ ಠಾಣೆಗೆ ಹಲವಾರು ಬಾರಿ ಕರೆಸಿದ್ದರೂ ಸಹ ನಾನು ಪೊಲೀಸ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಪಡೆಯಲು ಹಾಗೂ ಚೆಕ್ಕಿನಲ್ಲಿ ಹೆಚ್ಚಿನ ಹಣವನ್ನು ನಮೂದಿಸಿ ಹಣವನ್ನು ಪಡೆದುಕೊಳ್ಳಬೇಕು ಎಂಬ ಕಾರಣದಿಂದ ಪೊಲೀಸ ಠಾಣೆಯವರು ಕರೆಸಿದ್ದರೂ ಸಹ ನಾನು ಹೋಗಿರುವುದಿಲ್ಲ. ಹೆಚ್ಚಿಗೆ ಹಣವನ್ನು ನನಗೆ ಪಾವತಿ ಮಾಡಿದರೇ ನಾನು ಚೆಕ್ಕುಗಳನ್ನು ವಾಪಸ್ಸು ನೀಡುವುದಾಗಿ ಪೊಲೀಸ ಠಾಣೆಯಲ್ಲಿ ತಿಳಿಸಿ, ವಿನಾಕಾರಣ ಮುಂದೂಡುತ್ತಾ ಈ ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ನಿಂಗಣ್ಣ ಬಿ ರಾಥೋಡರವರಿಂದ ರೂ.3,55,000/- ಹಣವನ್ನು ಪಡೆಯಲು ಮಾತ್ರ ಹಕ್ಕುದಾರನಾಗಿದ್ದು, ಈ ಪ್ರಕರಣದ ಆರೋಪಿ ಹಾಗೂ ಸಿಸಿ ನಂ.213/2022 ರ ಪ್ರಕರಣದ ಆರೋಪಿಯಿಂದ ಕಾನೂನುಬದ್ಧವಾಗಿ ಹಣವನ್ನು ಪಡೆಯುವ ಅರ್ಹತೆ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ನಿಂಗಣ್ಣ ಬಿ ರಾಥೋಡರವರು ಪೊಲೀಸ ಠಾಣೆಯಲ್ಲಿ ಇತ್ಯರ್ಥ ಮಾಡಿದ ಹಾಗೇ ರೂ.3,55,000/- ಹಣವನ್ನು ಪಾವತಿ ಮಾಡಲು ಸಿದ್ಧರಿದ್ದರೂ ಸಹ ನಾನು ಆರೋಪಿ ಹಾಗೂ ಸಿಸಿ ನಂ.213/2022 ರ ಆರೋಪಿ ಕಡೆಯಿಂದ ಪಡೆದುಕೊಂಡು ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ತಿಳಿಸಿ ನನಗೆ ಪ್ರತ್ಯುತ್ತರ ನೋಟಿಸ ನೀಡಿದ್ದರೂ ಸಹ ನಾನು ಸದರಿ ವಿಷಯವನ್ನು ಮರೆಮಾಚಿ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮತ್ತು ಆರೋಪಿಯ ನಡುವೆ ಯಾವುದೇ ಸಾಲದ ವ್ಯವಹಾರ ನಡೆಯದೇ ಇದ್ದರೂ ಸಹ ಆರೋಪಿಯಿಂದ ಕಾನೂನು ವಿರುದ್ಧವಾಗಿ ಹಣವನ್ನು ಪಡೆದುಕೊಳ್ಳುವ

ಸಲುವಾಗಿ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳೀಯ ವ್ಯಕ್ತಿಯಿಂದ ಭದ್ರತೆ ಬೇಕು ಎಂದು ಹೇಳಿ ಆರೋಪಿ ಕಡೆಯಿಂದ ಪಡೆದುಕೊಂಡು ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**